# ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:29-08-2015ರ ನಡವಳಿಗಳು

## ವಿಷಯದ ಸಂಖ್ಯೆ : 176 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯ ನಿರ್ವಹಿಸುತ್ತಿರುವ ಪಾಲಿಕೆಯ ಪೌರಕಾರ್ಮಿಕರಿಗೆ ಚಪ್ಪಲಿ, ಕಂಬಳಿ, ರೈನ್ ಕೋಟ್ ಮತ್ತು ಸ್ವೆಟರ್ ಗಳನ್ನು ಖರೀದಿಸಲು ಪಾಲಿಕೆಯಿಂದ ಮೊತ್ತವನ್ನು ಪಾವತಿಸುವ ಕುರಿತು

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 23-07-2015 ರಂದು ಮಾನ್ಯ ಆಡಳಿತಗಾರರ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಮತ್ತು ಗ್ಯಾಂಗ್‌ಮೆನ್‌ಗಳ ಸಂಘದ ಪದಾಧಿಕಾರಿಗಳೊಂದಿಗೆ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ಖಾಯಂ ಪೌರಕಾರ್ಮಿಕರ ಬೇಡಿಕೆಗಳ ಬಗ್ಗೆ ನಡೆಸಿದ ಸಭೆಯಲ್ಲಿ, ಪೌರ ಕಾರ್ಮಿಕರಿಗೆ 5 ವರ್ಷಗಳಿಂದ ಟವಲ್, ಚಪ್ಪಲಿ, ಕಂಬಳಿ, ರೈನ್ ಕೋಟ್ ಮತ್ತು ಸ್ವೆಟರ್ ಗಳನ್ನು ನೀಡದಿರುವ ಬಗ್ಗೆ ಮಾನ್ಯ ಆಡಳಿತಗಾರರ ಗಮನಕ್ಕೆ ತಂದಿರುತ್ತಾರೆ.

ಈ ಕುರಿತು ಲೇಬರ್ ಬ್ಯೂರೋ, ಭಾರತ ಸರ್ಕಾರದ **Monthly ALL India Consumer Price Index for Industrial Workers (Base : 2001=100)** ರೀತ್ಯಾ ತಿಳಿಸಿರುವಂತೆ ದರಗಳನ್ನು ಅಳವಡಿಸಿಕೊಳ್ಳಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ. 2007-08ನೇ ಸಾಲಿನಿಂದ 2015-16ನೇ ಸಾಲಿನವರೆಗೆ ಈ ಹಿಂದೆ ಪಾಲಿಕೆಯ ಖಾಯಂ ಪೌರಕಾರ್ಮಿಕರಿಗೆ ದಿನಾಂಕ: 26.10.2013ರ ಕಛೇರಿ ಆದೇಶದಲ್ಲಿ ಪುರುಷ ಮತ್ತು ಮಹಿಳಾ ಪೌರಕಾರ್ಮಿಕರಿಗೆ ಪಾದರಕ್ಷೆಗಳನ್ನು ಒದಗಿಸುವ ಕುರಿತಂತೆ 2010-11 ರಿಂದ 2012-13ನೇ ಸಾಲಿನವರೆಗೆ ನೀಡಲಾಗುತ್ತಿರುವ ಪರಿಕರಗಳ ಬದಲಾಗಿ ಹಣ ಪಾವತಿಸಲು ಹಾಗೂ ದಿನಾಂಕ: 21-02-2008ರ ಆದೇಶದಲ್ಲಿ 2007-08ನೇ ಸಾಲಿನಲ್ಲಿ 5 ವರ್ಷಗಳಿಗೊಮ್ಮೆ ನೀಡಬೇಕಾದ ಸ್ವೆಟರ್, ಬ್ಲಾಂಕೆಟ್ ಮತ್ತು ಮಳೆ ಕೋಟುಗಳ ಖರೀದಿ ಬಾಬ್ತು ನಗದಾಗಿ ನೀಡುವ ಕುರಿತು ಕ್ರಮವಾಗಿ ಪಾವತಿಸಲು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಗೆ ಆದೇಶಿಸಲಾಗಿರುತ್ತದೆ.

ಮೇಲ್ಕಂಡ ಆದೇಶಗಳಂತೆ ವಿವಿಧ ಪರಿಕರಗಳ ದರಗಳು ಈ ಕೆಳಕಂಡಂತೆ ಇರುತ್ತದೆ.

1. 2 ಜೊತೆ ಪಾದರಕ್ಷೆಗಳಿಗೆ ಪ್ರತಿವರ್ಷಕ್ಕೆ ಪುರುಷ ಪೌರಕಾರ್ಮಿಕರಿಗೆ ರೂ 680+ ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ ಹಾಗೂ ಮಹಿಳಾ ಪೌರಕಾರ್ಮಿಕರಿಗೆ ರೂ. 525+ ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ
2. 5 ವರ್ಷಕ್ಕೊಮ್ಮೆ ನೀಡಲಾಗುತ್ತಿರುವ ಸ್ವೆಟರ್, ಬ್ಲಾಂಕೆಟ್ ಮತ್ತು ಮಳೆ ಕೋಟುಗಳ 2007-2008ನೇ ಸಾಲಿನ ದರಗಳು-ಸ್ವೆಟರ್-ರೂ.535.00, ಬ್ಲಾಂಕೆಟ್ - ರೂ. 618.00 ಮತ್ತು ಮಳೆ ಕೋಟುಗಳು - ರೂ. 434.00

ಸದರಿ ದರಗಳನ್ನು ಪರಿಗಣಿಸಿ 2013-14ರಿಂದ 2015-16ನೇ ಸಾಲಿಗಾಗಿ ಪಾದರಕ್ಷೆಗಳನ್ನು ಒದಗಿಸಲು ಈ ಕೆಳಕಂಡಂತೆ ದಿನಾಂಕ: 26-10-2013 ದರಗಳಿಗೆ ಲೇಬರ್ ಬ್ಯೂರೋ, ಭಾರತ ಸರ್ಕಾರದ ಅಂಕಿಅಂಶಗಳ ರೀತ್ಯಾ ದರಗಳನ್ನು ಹೆಚ್ಚಿಸಿ ಅದರಂತೆ 2 ಜೊತೆ ಪಾದರಕ್ಷೆಗಳಿಗೆ ಪ್ರತಿವರ್ಷಕ್ಕೆ

| ಕ್ರ. ಸಂ | ಸಾಲು | ಮಹಿಳಾ ಪೌರಕಾರ್ಮಿಕರಿಗೆ ಪ್ರತಿ ಜೊತೆ ಪಾದರಕ್ಷೆಗೆ ದರ ರೂ. ಗಳಲ್ಲಿ | | ಪುರುಷ ಪೌರಕಾರ್ಮಿಕರಿಗೆ ಪ್ರತಿ ಜೊತೆ ಪಾದರಕ್ಷೆಗೆ ದರ ರೂ. ಗಳಲ್ಲಿ | |
|---|---|---|---|---|---|
| | | ಮೌಲ್ಯವರ್ಧಿತ ತೆರಿಗೆ ಹೊರತು ಪಡಿಸಿ | 14.50% **VAT** ಚರ್ಮದ ಪಾದರಕ್ಷೆಗೆ | ಮೌಲ್ಯವರ್ಧಿತ ತೆರಿಗೆ ಹೊರತು ಪಡಿಸಿ | 14.50% **VAT** ಚರ್ಮದ ಪಾದರಕ್ಷೆಗೆ |
| 1. | 2013-14 | 525-00 | 601-125 | 680-00 | 778-6 |

....................2

| | | | | | |
|---|---|---|---|---|---|
| 2. | 2014-15 | 558-00 | 638-91 | 722-74 | 827-5373 |
| 3. | 2015-16 | 571-72 | 654-6194 | 740-51 | 847-88392 |
| ಒಟ್ಟು ಮೊತ್ತ | | 1655-00 | 1895-00 | 2143-00 | 2454-00 |

ಇದಲ್ಲದೆ, 2002-03ನೇ ಸಾಲಿನ ನಂತರ 2007-08ರಲ್ಲಿ ಸ್ವೇಟರ್, ಬ್ಲಾಂಕೆಟ್ ಮತ್ತು ಮಳೆ ಕೋಟುಗಳನ್ನು ನೀಡಲಾಗಿದ್ದು, 2012-13ನೇ ಸಾಲಿಗಾಗಿ ನೀಡಬೇಕಾಗಿದ್ದು, ಲೇಬರ್ ಬ್ಯೂರೋ, ಭಾರತ ಸರ್ಕಾರದ ಅಂಕಿ ಅಂಶಗಳ ರೀತ್ಯಾ ಮೇ 2015 ರಂತೆ ಪರಿಗಣಿಸಿದಲ್ಲಿ ದರಗಳು ಈ ಕೆಳಕಂಡಂತೆ ಇರುತ್ತದೆ.

1. ಸ್ವೇಟರ್ - ರೂ. 1022/- ಗಳು
2. ಬ್ಲಾಂಕೆಟ್ - ರೂ. 1181/-ಗಳು
3. ಮಳೆ ಕೋಟು -ರೂ. 829.4/- ಗಳು

ಮೇಲ್ಕಂಡ ಅಂಶಗಳಂತೆ ಪ್ರತಿ ಮಹಿಳಾ ಮತ್ತು ಪುರುಷ ಪೌರಕಾರ್ಮಿಕರುಗಳಿಗೆ 2013-14ರಿಂದ 2015-16ನೇ ಸಾಲಿಗಾಗಿ ಪಾದರಕ್ಷೆಗಳನ್ನು ಒದಗಿಸಲು ಹಾಗೂ 2012-13ನೇ ಸಾಲಿನಲ್ಲಿ (5 ವರ್ಷಕ್ಕೊಮ್ಮೆ) ನೀಡಬೇಕಾಗಿರುವ ಸ್ವೇಟರ್, ಬ್ಲಾಂಕೆಟ್ ಮತ್ತು ಮಳೆ ಕೋಟುಗಳನ್ನು ಖರೀದಿಸಲು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಮೊತ್ತವನ್ನು ನೀಡಬೇಕಾಗಿರುತ್ತದೆ.

| ಕ್ರ. ಸಂ | ಸಾಲು ಮತ್ತು ಪರಿಕರಗಳು | ಮಹಿಳಾ ಪೌರಕಾರ್ಮಿಕರಿಗೆ ರೂ. ಗಳಲ್ಲಿ | ಪುರುಷ ಪೌರಕಾರ್ಮಿಕರಿಗೆ ರೂ. ಗಳಲ್ಲಿ |
|---|---|---|---|
| 1. | 2013-14 / 2 ಜೊತೆ ಪಾದರಕ್ಷೆ | 1202-00 | 1557-00 |
| 2. | 2014-15 / 2 ಜೊತೆ ಪಾದರಕ್ಷೆ | 1278-00 | 1655-00 |
| 3. | 2015-16 / 2 ಜೊತೆ ಪಾದರಕ್ಷೆ | 1309-00 | 1696-00 |
| 4. | 2012-13 ಸಾಲಿಗಾಗಿ ಸ್ವೇಟರ್ (5 ವರ್ಷಕ್ಕೊಮ್ಮೆ) ಹಾಲಿ | 1022-00 | 1022-00 |
| 5. | 2012-13 ಸಾಲಿಗಾಗಿ ಬ್ಲಾಂಕೆಟ್ (5 ವರ್ಷಕ್ಕೊಮ್ಮೆ) ಹಾಲಿ | 1181-00 | 1181-00 |
| 6. | 2012-13 ಸಾಲಿಗಾಗಿ ಮಳೆ ಕೋಟು (5 ವರ್ಷಕ್ಕೊಮ್ಮೆ) ಹಾಲಿ ದರಗಳಂತೆ | 829-40 | 829-40 |
| **ಒಟ್ಟು ಮೊತ್ತ** | | **6822-00** | **7941-00** |

ಈ ಮೇಲೆ ವಿವರಿಸಿದಂತೆ 2013-14ರಿಂದ 2015-16ನೇ ಸಾಲಿಗಾಗಿ ಪಾದರಕ್ಷೆಗಳನ್ನು ಒದಗಿಸಲು ಹಾಗೂ ಈ ಹಿಂದೆ 2007-08ನೇ ಸಾಲಿನಲ್ಲಿ ನೀಡಿರುವುದನ್ನು ಪರಿಗಣಿಸಿ, 2012-13ನೇ ಸಾಲಿನಲ್ಲಿ (5 ವರ್ಷಕ್ಕೊಮ್ಮೆ) ನೀಡಬೇಕಾಗಿರುವ ಸ್ವೇಟರ್, ಬ್ಲಾಂಕೆಟ್ ಮತ್ತು ಮಳೆ ಕೋಟುಗಳನ್ನು ಒದಗಿಸಲು ತಗಲುವ ವೆಚ್ಚವನ್ನು ಪೌರಕಾರ್ಮಿಕರಿಗೆ ಪಾವತಿಸಲು ಯೋಜಿಸಿದಂತೆ ಮೇಲ್ಕಂಡ ಪರಿಕರಗಳ ಬಾಬ್ತು ಮಹಿಳಾ ಪೌರಕಾರ್ಮಿಕರಿಗೆ ರೂ.6,822/- ಗಳನ್ನು ಮತ್ತು ಪುರುಷ ಪೌರಕಾರ್ಮಿಕರುಗಳಿಗೆ ರೂ.7,941/- ಗಳನ್ನು ಪಾವತಿಸಬೇಕಾಗಿರುತ್ತದೆ.

...................3

ವಲಯವಾರು ಪೌರಕಾರ್ಮಿಕರ ಸಂಖ್ಯೆ ಜನವರಿ 2015ರ ಮಾಹೆಯಲ್ಲಿ ಹೆಚ್.ಆರ್.ಎಂ.ಎಸ್ ಮೂಲಕ ಪಡೆದ ವರದಿಯಂತೆ ಈ ಕೆಳಕಂಡತ್ತಿದ್ದು, ವಲಯ ವಾರು ಬೇಡಿಕೆಯ ಮೊತ್ತವನ್ನು ಸಹ ಈ ಕೋಷ್ಟಕದಲ್ಲಿ ನಮೂದಿಸಲಾಗಿರುತ್ತದೆ (ಮಹಿಳಾ ಪೌರಕಾರ್ಮಿಕರ ಸಂಖ್ಯೆ ಶೇ 60% ರಷ್ಟೆಂದು ಪರಿಗಣಿಸಿ).

| ಕ್ರ. ಸಂ | ವಲಯ | ಖಾಯಂ ಪೌರಕಾರ್ಮಿಕ ಸಂಖ್ಯೆ | ಸಮಾನ ವೇತನ ಸಮಾನ ಕೆಲಸದ ಪೌರಕಾರ್ಮಿಕರ ಸಂಖ್ಯೆ | ಒಟ್ಟು | ಪರಿಕರಗಳನ್ನು ಖರೀದಿಸಲು ತಗಲುವ ವೆಚ್ಚ (ರೂ. ಗಳಲ್ಲಿ) |
|---|---|---|---|---|---|
| 1 | ಪೂರ್ವ | 789 | 112 | 901 | 6549910 |
| 2 | ಪಶ್ಚಿಮ | 1074 | 01 | 1075 | 7814820 |
| 3 | ದಕ್ಷಿಣ | 724 | 00 | 724 | 5263190 |
| 4 | ಬೊಮ್ಮನಹಳ್ಳಿ | 29 | 38 | 67 | 487063.2 |
| 5 | ದಾಸರಹಳ್ಳಿ | 13 | 12 | 25 | 181740 |
| 6 | ಮಹಾದೇವಪುರ | 47 | 33 | 80 | 581568 |
| 7 | ಆರ್.ಆರ್.ನಗರ | 69 | 24 | 93 | 676072.8 |
| 8 | ಯಲಹಂಕ | 89 | 54 | 143 | 1039553 |
| **ಒಟ್ಟು** | | **2834** | **274** | **3108** | **22593917** |

ಈ ಮೇಲ್ಕಂಡ ಕೋಷ್ಟಕದನ್ವಯ ಈ ಹಿಂದೆ ನೀಡಲಾದ ದರಗಳಿಗೆ ಲೇಬರ್ ಬ್ಯೂರೋ, ಭಾರತ ಸರ್ಕಾರದ ಅಂಕಿ ಅಂಶಗಳ ರೀತ್ಯಾ, ಈ ಹಿಂದೆ ನೀಡಲಾದ ದರಗಳನ್ನು ಪರಿಷ್ಕರಿಸಿದಂತೆ ವರ್ಷಕ್ಕೆ 2 ಜೊತೆ ಪಾದರಕ್ಷೆಗಳನ್ನು ಹಾಗೂ 5 ವರ್ಷಗಳಿಗೊಮ್ಮೆ ನೀಡಬೇಕಾದ ಸ್ವೆಟರ್, ಬ್ಲಾಂಕೆಟ್ ಮತ್ತು ಮಳೆ ಕೋಟುಗಳನ್ನು ಖರೀದಿಸಲು ವಿವಿಧ ವಲಯಗಳಿಗೆ ಘನತ್ಯಾಜ್ಯ ನಿರ್ವಹಣೆಗೆ ತೊಡಗಿಸಿಕೊಂಡಿರುವ ಪಾಲಿಕೆಯ ಪೌರಕಾರ್ಮಿಕರಿಗೆ ಮಾತ್ರ ಈ ಹಿಂದೆ ಈ ಪರಿಕರಗಳನ್ನು ಆಯಾ ಅವಧಿಗೆ ಒದಗಿಸಿದೇ ಇರುವ ಕುರಿತು ದೃಢೀಕರಿಸಿಕೊಂಡು ಸಂಬಳದೊಂದಿಗೆ ಪಾವತಿಸುವಂತೆ ಸೂಚಿಸಬಹುದಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸುತ್ತಿರುವ ಪಾಲಿಕೆಯ ಪೌರಕಾರ್ಮಿಕರಿಗೆ ಈ ಹಿಂದೆ ನೀಡಲಾದ ದರಗಳನ್ನು ಪರಿಷ್ಕರಿಸಿದಂತೆ 2013-14ರಿಂದ 2015-16ನೇ ಸಾಲಿಗಾಗಿ ವರ್ಷಕ್ಕೆ 2 ಜೊತೆ ಪಾದರಕ್ಷೆಗಳನ್ನು (ಆಯಾ ಸಾಲಿನ ದರಗಳಂತೆ) ಹಾಗೂ 2012-13ನೇ ಸಾಲಿಗಾಗಿ 5 ವರ್ಷಗಳಿಗೊಮ್ಮೆ ನೀಡಬೇಕಾದ ಸ್ವೆಟರ್, ಬ್ಲಾಂಕೆಟ್ ಮತ್ತು ಮಳೆ ಕೋಟುಗಳನ್ನು (ಮೇ 2015 ರಂತೆ ದರಗಳನ್ನು ಪರಿಗಣಿಸಿ) ಖರೀದಿಸಲು ಮೊತ್ತವನ್ನು ಸಂಬಳದೊಂದಿಗೆ ಪಾವತಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-08-2015ರ ಟಿಪ್ಪಣಿ.

**<u>ತೀರ್ಮಾನ:</u> "2015-16ಕ್ಕೆ 2 ಜೊತೆ ಪಾದರಕ್ಷೆಗಳು, ಸ್ವೆಟರ್, ಬ್ಲಾಂಕೆಟ್ ಹಾಗೂ ಮಳೆಕೋಟನ್ನು ಖರೀದಿಸಲು ಮೊತ್ತವನ್ನು ಪಾವತಿಸಲು ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು